website: www.bwssb.gov.in

FAX : 080-22945102
Phone : 22945386

# ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

# BANGALORE WATER SUPPLY & SEWERAGE BOARD

1st Floor, Cauvery Bhavan, K.G.Road, Bangalore-560009.

ಸಂಖ್ಯೆ: ಬೆಂಜಮಂ
No : BWSSB ]ಮುಆಅ–ಕಾ/23–32–2017/ 4864 /2017–18

ದಿನಾಂಕ
Date 09 .2.2018

## ಅಧಿಸೂಚನೆ

**ವಿಷಯ: ಕಿರಿಯ ಅಭಿಯಂತರ(ಸಿವಿಲ್) ಹುದ್ದೆಯ 2015ರ ನೇಮಕಾತಿ ಪ್ರಕ್ರಿಯೆ ಬಗ್ಗೆ.**

**ಉಲ್ಲೇಖ:**
1. **ಅಧಿಸೂಚನೆ ಸಂಖ್ಯೆ: ಬೆಂಜಮಂ/ಅಕ/ಮುಆಅ–ಕಾ/397–31–12/4226/14–15 ದಿನಾಂಕ: 23.2.2015.**
2. **ದಿನಾಂಕ: 5.2.2018ರಂದು ನಡೆದ ಮಂಡಳಿ ಸಭೆಯ ನಡವಳಿ.**
3. **ಕಚೇರಿ ಟಿಪ್ಪಣಿಗೆ ಮಾನ್ಯ ಅಧ್ಯಕ್ಷ ರವರು ದಿನಾಂಕ: 08.02.2018ರಂದು ನೀಡಿರುವ ಆದೇಶ.**

---*---

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ–(1)ರ ಅಧಿಸೂಚನೆಯಲ್ಲಿ ಕಿರಿಯ ಅಭಿಯಂತರ(ಸಿವಿಲ್) ವೃಂದದ ಒಟ್ಟು 14(13 ಮೂಲ + 1 ಸ್ಥಳೀಯ) ಖಾಲಿ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಕುರಿತು ಅಧಿಸೂಚಿಸಿರುವುದನ್ನು ದಿನಾಂಕ: 5.2.2018ರ ಮಂಡಳಿ ಸಭೆಯ ನಿರ್ಣಯದಂತೆ ರದ್ದುಪಡಿಸಿ ಆದೇಶಿಸಲಾಗಿದೆ.

ಮುಂದುವರೆದಂತೆ, ಉಲ್ಲೇಖ–(1)ರ ಅಧಿಸೂಚನೆಯನ್ವಯ ಕಿರಿಯ ಅಭಿಯಂತರ(ಸಿವಿಲ್) ಹುದ್ದೆಗೆ ಅರ್ಜಿ ಸಲ್ಲಿಸಿದ್ದ ಅರ್ಹ ಅಭ್ಯರ್ಥಿಗಳಿಗೆ ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲು ನಿರ್ಣಯಿಸಲಾಗಿರುತ್ತದೆ:

❖ ಕಿರಿಯ ಅಭಿಯಂತರ(ಸಿವಿಲ್) ಹುದ್ದೆಗೆ ಅರ್ಜಿ ಸಲ್ಲಿಸಿ ನಿಗದಿತ ಶುಲ್ಕ ಪಾವತಿಸಿರುವ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕ ಹಿಂಪಾವತಿಸಲು ನಿರ್ಣಯಿಸಿರುವುದರಿಂದ ಉಲ್ಲೇಖ–(1)ರ ಅಧಿಸೂಚನೆಯನ್ವಯ ಶುಲ್ಕ ಪಾವತಿಸಿರುವ ಅಭ್ಯರ್ಥಿಗಳು ಅರ್ಜಿಯ ನಕಲು ಪ್ರತಿ, ಶುಲ್ಕ ಪಾವತಿಯ ಬ್ಯಾಂಕ್ ಚಲನ್ ಪ್ರತಿಯೊಂದಿಗೆ ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ, 1ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು ಜಲ ಮಂಡಳಿ ರವರಿಗೆ ಲಿಖಿತ ಮನವಿಯನ್ನು ಸಲ್ಲಿಸಬೇಕು. ಅಭ್ಯರ್ಥಿಗಳು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ನಿಗದಿತ ಮೊತ್ತವನ್ನು(ಬಡ್ಡಿ ರಹಿತ) RTGS

ಮೂಲಕ ಪಾವತಿಸುವುದರಿಂದ ಅಭ್ಯರ್ಥಿಗಳು ತಮ್ಮ ಬ್ಯಾಂಕ್ ಖಾತೆ ಸಂಖ್ಯೆ, ಬ್ಯಾಂಕ್ ಮತ್ತು ಶಾಖೆಯ ಹೆಸರು, IFSC Code ನ ವಿವರಗಳನ್ನು ಅರ್ಜಿಯ ಜೊತೆಗೆ ಕಡ್ಡಾಯವಾಗಿ ಸಲ್ಲಿಸುವುದು.

❖ ರದ್ದುಪಡಿಸಲಾದ ಒಟ್ಟು 14 ಕಿರಿಯ ಅಭಿಯಂತರ(ಸಿವಿಲ್) ಹುದ್ದೆಗಳನ್ನು ಮುಂದಿನ ನೇಮಕಾತಿ ಪ್ರಕ್ರಿಯೆಗೆ ಪರಿಗಣಿಸಲು ಉಲ್ಲೇಖ- (2)ರ ಮಂಡಳಿ ಸಭೆಯಲ್ಲಿ ನಿರ್ಣಯಿಸಿರುವುದರ ಅನ್ವಯ 2015ರ ನೇಮಕಾತಿ ಅಧಿಸೂಚನೆಯಲ್ಲಿ ಒಟ್ಟು 14(13 ಮೂಲ + 1 ಸ್ಥಳೀಯ) ಕಿರಿಯ ಅಭಿಯಂತರ (ಸಿವಿಲ್) ಹುದ್ದೆಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಮಂಡಳಿಯು ಮುಂದಿನ ದಿನಗಳಲ್ಲಿ ಅಧಿಸೂಚಿಸಲಾಗುವ ನೇರ ನೇಮಕಾತಿಯಲ್ಲಿ ಕಿರಿಯ ಅಭಿಯಂತರ(ಸಿವಿಲ್) 14 (13 ಮೂಲ + 1 ಸ್ಥಳೀಯ) ಹುದ್ದೆಗಳಿಗೆ ಮಾತ್ರ ಸಂಬಂಧಪಟ್ಟಂತೆ ಅರ್ಜಿ ಸಲ್ಲಿಸುವ ವೇಳೆಗೆ ಸರ್ಕಾರವು ವಿವಿಧ ಮೀಸಲಾತಿಗಳಿಗೆ ನಿಗದಿಪಡಿಸಿರುವ ಗರಿಷ್ಠ ವಯೋಮಿತಿ ಮೀರಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ವಯೋಮಿತಿ ಸಡಿಲಿಕೆಯನ್ನು ನೀಡಲಾಗುವುದು. ವಯೋಮಿತಿ ಸಡಿಲಿಕೆಯ ಕುರಿತು ಮಂಡಳಿಯ ನಿರ್ಧಾರವೇ ಅಂತಿಮ ನಿರ್ಧಾರವಾಗಿರುತ್ತದೆ.

❖ ಉಳಿದಂತೆ ದಿನಾಂಕ: 23.02.2015ರ ನೇರ ನೇಮಕಾತಿಯ ಅಧಿಸೂಚನೆಯಲ್ಲಿ ಬೇರೆ ಯಾವುದೇ ರೀತಿಯ ಬದಲಾವಣೆಗಳಿರುವುದಿಲ್ಲ.

ಮುಖ್ಯ ಆಡಳಿತಾಧಿಕಾರಿ ಹಾಗೂ ಕಾರ್ಯದರ್ಶಿ
ಬೆಂಗಳೂರು ಜಲಮಂಡಳಿ
Dev.:. 9/2/18

ಪ್ರತಿಯನ್ನು ಸೂಚನಾ ಫಲಕಕ್ಕೆ/ಮಂಡಳಿಯ ವೆಬ್ ಸೈಟ್‌ನಲ್ಲಿ ಪ್ರಕಟಿಸಲು